# ಶ್ರೀಶೈಲ ದರ್ಶನ


ಶಿಲ್ಪಿ

ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಆಧ್ಯಾತ್ಮಿಕ ಸಾಧನೆಯ ಒಂದು ಪ್ರಮುಖ ಅಂಗ. ಅಲ್ಲಿನ ಮಹಿಮೆಯನ್ನು ಕುರಿತು ಪರಿಭಾವಿಸುತ್ತ ಭಗವಂತನ ಲೀಲೆಯನ್ನು ಹಾಗೂ ಕರುಣೆಯನ್ನು ಕುರಿತು ಧ್ಯಾನಿಸುವುದು ಸಾಧಕನಿಗೆ ಪ್ರೇರಣೆಯನ್ನು ನೀಡುತ್ತದೆ. ಸಂತರ ದಿವ್ಯ ಅನುಭವಗಳಿಂದ ಪವಿತ್ರವಾಗಿರುವ ಕ್ಷೇತ್ರವೆಂದರೆ ಭುವಿಯ ಮೇಲಿನ ಸ್ವರ್ಗವೇ. ದಾವಣಗೆರೆಯ ನಿವಾಸಿಗಳಾದ ಲೇಖಕರು ಇಂತಹ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು, ಪ್ರವಾಸೋದ್ಯಮದ ಹೆಸರಿನಲ್ಲಿ ನಡೆಯುತ್ತಿರುವ ವ್ಯಾಪಾರ ವಿನಿಮಯಗಳನ್ನು ಬಹಳ ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾರೆ.

ಶ್ರೀಶೈಲ ಎಂದರೆ ಸಿರಿಶೈಲ, ಶ್ರೀಮಂತವಾದ ಚೆನ್ನಮಲ್ಲಿಕಾರ್ಜುನನ ಆದಿಕ್ಷೇತ್ರಕ್ಕೆ ಹೊರಟಿದ್ದು ಒಟ್ಟು ನಾವು ಇಪ್ಪತ್ನಾಲ್ಕು ಮಂದಿ. ಅದರಲ್ಲಿ ಅಕ್ಕಮಹಾದೇವಿಯ ಕದಳಿಯಲ್ಲಿ ೪೫ ದಿನಗಳ ಕಾಲ ಅನುಷ್ಠಾನ ಕೈಗೊಂಡಿದ್ದ ಒಬ್ಬ ಸ್ವಾಮಿಗಳೂ ಜೊತೆಗಿದ್ದರು. ಅವರ ಮಾರ್ಗದರ್ಶನವೇ ನಮಗೆ ಕದಳಿಯನ್ನು ಕಾಣಲು ಪ್ರೇರಣೆ ನೀಡಿತು. ರಾತ್ರಿ ೧೧.೩೦ಕ್ಕೆ ಹುಬ್ಬಳ್ಳಿಯನ್ನು ಬಿಟ್ಟ ರೈಲುಗಾಡಿಯು ಬೆಳಿಗ್ಗೆ ೧೧.೩೦ಕ್ಕೆ ನಂದ್ಯಾಲವನ್ನು ಪ್ರವೇಶಿಸಿತು. ಅದು ಮಾಜಿ ಪ್ರಧಾನಿ ದಿವಂಗತ ಪಿ.ವಿ.ನರಸಿಂಹ ರಾವ್‌ರವರು ಚುನಾವಣೆಗೆ ನಿಂತಿದ್ದ ಕ್ಷೇತ್ರ ಎಂಬುದು ನೆನಪಿಗೆ ಬಂತು. ನಾವುಗಳು 'ಶ್ರೀಶೈಲಂ' ಬಸ್ಸನ್ನು ಏರಿ ಸಾಗುತ್ತಿರುವಾಗ ಸಜ್ಜನರ ಸಂಗ, ಸದ್ಭಕ್ತರ ಸಾಮೀಪ್ಯ, ಭಗವತ್‌ಪ್ರೇಮಿಗಳ ಸನಿಹ ಎಷ್ಟು ಮಧುರ, ಮನೋಹರ ಎನ್ನಿಸುತ್ತಿತ್ತು. ಸಜ್ಜನರೊಂದಿಗೆ ಲೌಕಿಕ ಪರಿಹಾಸದಲ್ಲಿ ತೊಡಗಿದರೂ ಅದು ಭಗವತ್ಸಾಧನೆಯೇ ಆಗುತ್ತದೆ. ಆದರೆ ಭವಿಗಳೊಂದಿಗೆ ದೇವರ ವಿಷಯ ಮಾತಾಡುತ್ತಿದ್ದರೂ ಅದು ಶುಷ್ಕ ಕರ್ಮಬಂಧಿತ ಸಂಭಾಷಣೆಯಾಗುತ್ತದೆ. **ಶರಣ ನಿದ್ರೈದೊಡೆ ಜಪ ಕಾಣಿರೊ, ಎದ್ದು ಕುಳಿತರೆ ಶಿವರಾತ್ರಿ ಕಾಣಿರೋ. . . ಶರಣರ ಕಾಯವೇ ಕೈಲಾಸ ಕಾಣಿರೋ**. . . ಎಂಬ ವಚನವು ನೆನಪಿಗೆ ಬರುತ್ತಿತ್ತು.

ಶ್ರೀಶೈಲದ ಗಿರಿಗಳನ್ನು 'ದೋರ್ನಾಲು' ಎಂಬ ಊರಿನಿಂದ ಮುಂದೆ ಸಾಗುತ್ತಲೇ ಕಾಣುತ್ತೇವೆ. ಶೈಲವೆಂದರೆ ಬೆಟ್ಟ, ಗುಡ್ಡ, ಪರ್ವತ. ಶಿವನು ವಾಸಿಸುವ ಹಿಮಾಚಲ ಪರ್ವತವೇ ನಿಜವಾದ ಶ್ರೀಶೈಲ! ಈ ಶ್ರೀಶೈಲಗಳು ಮಾನವ ಬದುಕಿನ ದಿವ್ಯಕುಲಶೈಲಗಳು! ಬಾಲಕ ಸಿದ್ಧರಾಮ, ಅಕ್ಕಮಹಾದೇವಿ, ಹೇಮರೆಡ್ಡಿ ಮಲ್ಲಮ್ಮ, ಅಲ್ಲಮನಂತಹ ಮಹಾನುಭಾವರಿಗೆ ಮಹಾಬೆಳಗನ್ನು ತೋರಿದ ಮಲ್ಲಿಕಾರ್ಜುನನು ವಿರಾಟ್‌ರೂಪದಲ್ಲಿ ತಪಗೈಯುತ್ತಿರುವ ಶ್ರೀಮಂತ ಶೈಲ...! ಶ್ರೀಗಿರಿ, ಕಾನನ, ಕಂದರಗಳು ಪ್ರಕೃತಿ ಎಂಬ ಜಗನ್ಮಾತೆಯ ಸ್ಥೂಲರೂಪಗಳಾಗಿ ಕಾಣತೊಡಗಿದ್ದವು. ಭಕ್ತಿಭಾವುಕತೆಯ ಪರಿಣಾಮವೋ ಏನೋ ಆ ಶ್ರೀಶೈಲಗಿರಿಯು ಹೃದಯದಲ್ಲಿ ಭಕ್ತಿ-ಪ್ರೇಮ-ರಸವನ್ನು ಸೃಜಿಸಿ ಅದು ಧಾರೆಯಾಗಿ ಹರಿದು ಮನವನ್ನು ಮುದಗೊಳಿಸಿತು.

ರಾತ್ರಿ ೮.೩೦ಕ್ಕೆ ಶ್ರೀಶೈಲ ತಲುಪಿ ಭವಭಾರದಂತಹ ನಮ್ಮ ಸರಂಜಾಮುಗಳನ್ನು ಹಿಡಿದು ಹೊರಟಾಗ ಅಕ್ಕಮಹಾದೇವಿಯ



ಶ್ರೀಶೈಲ ಮಲ್ಲಿಕಾರ್ಜುನ ದೇವಮಂದಿರ

ವೈರಾಗ್ಯ, ನಗ್ನತೆ, ಬಯಲು ಗುಣ ನೆನಪಾಯಿತು. ದೇಗುಲದ ಇಕ್ಕೆಲದ ರಸ್ತೆಗಳಲ್ಲೂ ಅಂಗಡಿ, ಉಪಹಾರಗೃಹಗಳು, ಜನಜಂಗುಳಿ, ವಾಹನಗಳ ಆರ್ಭಟ, ಶಿವನ ಚಿತ್ರಪಟಗಳು, ಗೀತೆಗಳು, ಭಿಕ್ಷುಕರು, ಭಸ್ಮಧಾರಿ ರೇಷ್ಮೆ ವಸ್ತ್ರಾನ್ವಿತ ರಾಜಸಿಕ ಭಕ್ತರು, ಕಾವಿಯುಟ್ಟ ಸಂನ್ಯಾಸಿಗಳು, ಮರಿ ಶಿಷ್ಯರುಗಳು, ಧ್ವನಿವರ್ಧಕದಲ್ಲಿ ಕೇಳುತ್ತಿದ್ದ ಓಂ ನಮಃಶಿವಾಯ.... ವಸತಿಗಾಗಿ ಎಲ್ಲಿ ಹುಡುಕಿದರೂ 'ಖಾಲಿ ಇಲ್ಲ' ಎಂಬ ಹಲಗೆ ಕಂಡಾಗ ನಿರಾಶೆಯಾಗಿ ಮಠಗಳು, ಅತಿಥಿಗೃಹಗಳು ಲಾಡ್ಜ್‌ಗಳಂತೆಯೂ, ಆ ಆವರಣವು ಬೆಂಗಳೂರಿನ ಮೆಜೆಸ್ಟಿಕ್ ಆಗಿ ಕಂಡು ಆತಂಕವಾಯಿತು. ಆದರೂ ಭಕ್ತಿಯ ಅಲೆಯು ನಮ್ಮ ಮನಃಸ್ಥಿತಿಯನ್ನು ತಮೋಗತಿಗೆ ಇಳಿಯಲು ಬಿಡುತ್ತಿರಲಿಲ್ಲ. ಅಂತೂ ಸದ್ಗುರುವಿನ ದಯೆಯು ಬಳಲಾಡಿಸಿ ಕಡೆಗೆ ಸ್ವಾಮಿಗಳ ಪರಿಚಯದ ಮೂಲಕ ಮಠವೊಂದರಲ್ಲಿ ನೆಲೆಯನ್ನು ನೀಡಿತು. ಭವ-ಭಾವವು ಚಿಪ್ಪು-ಕೊಬ್ಬರಿಯಂತೆ ಅನುಬಂಧಿತವಾಗಿ ಈ ಜಗತ್ತಿನಲ್ಲಿ ಜೀವರಾಶಿಯನ್ನು ಪೊರೆಯುತ್ತಿದೆ ಎನ್ನಿಸಿತು.

ಧರ್ಮಸ್ಥಳ, ತಿರುಪತಿ, ಕಾಶಿ, ರಾಮೇಶ್ವರಾದಿ ಕ್ಷೇತ್ರಗಳಲ್ಲಿ ಇತ್ತೀಚೆಗೆ ಕಾಲಿಟ್ಟರೆ ಶುದ್ಧಭಾವ ಹುಟ್ಟುವುದೇ ಅಪರೂಪ. ಹಣ, ವ್ಯಾಪಾರಗಳ ಪ್ರಭಾವಗಳಲ್ಲಿ ದೇಗುಲಗಳು ದೇವರು ನೆಲೆ

ಗೊಂಡ ತಾಣಗಳಾಗಿ ಕಾಣುತ್ತಿಲ್ಲ. ಆದ್ದರಿಂದ ಇಂತಹ ದೇಗುಲಗಳನ್ನು ಕಂಡಾಗ "ಹೊರಗೇನಿದೆ.. ಒಳಗೆ ನೋಡು" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಧರ್ಮದರ್ಶನದ ಸರತಿಯ ಸಾಲಿನಲ್ಲಿ ನಿಂತಾಗ ಬಡ ಬಗ್ಗರು, ನಿರಹಂಕಾರಿಗಳು, ಅವಸರವಿಲ್ಲದವರು, ನಿಜಭಕ್ತರು ಗಳು ಮಾತ್ರ ಧರ್ಮದರ್ಶನಕ್ಕೆ ನಿಲ್ಲುತ್ತಾರೆ ಎಂಬುದು ತಿಳಿಯಿತು. ಹಣಬಳಸಿ ವಿಶೇಷ ಪೂಜೆಯ ಹೆಸರಲ್ಲಿ ದೇಗುಲದಲ್ಲಿ ಪ್ರಭಾವ, ಅಹಂಕಾರ ಬೆಳಗುವ ಜನರು ಅಧರ್ಮದರ್ಶನದ ಪಥವನ್ನು ಆಯ್ಕೆ ಮಾಡಿಕೊಂಡವರಾಗುತ್ತಾರೆಯೆ? ಬರೀ ಶಬ್ದಗಳೇ ಇಷ್ಟೊಂದು ಅರ್ಥವನ್ನು ಬಿಡಿಸಿ ತೋರುತ್ತಿರುವಾಗ ಅದರ ಹಿಂದಣ ಭಾವಗಳು ಅದೆಷ್ಟು ಅರ್ಥವನ್ನು ಹೊರಗೆಡುಹಬಲ್ಲವು ಎನ್ನಿಸಿತು. ಸರದಿಯ ಒತ್ತಡ, ಒತ್ತುವಿಕೆ, ತಳ್ಳಾಟಗಳ ನಡುವೆಯೂ ಗುಡಿಯ ಪ್ರವೇಶದ್ವಾರದ ಬಳಿ ಇರುವ ಎರಡು ಬಿಳಿಯ ನಂದಿಗಳನ್ನು ಕಂಡು ಸ್ಪರ್ಶಿಸಿದಾಗ ಅವು ನಮ್ಮಲ್ಲಿ ಭಕ್ತಿರಸವನ್ನು, ಶಿವನ ನಂದಿಯ ನೆನಪನ್ನು ಉದ್ದೀಪಿಸಿದವು. ಆರಕ್ಷಕರಿಂದ ದಬ್ಬಿಸಿಕೊಂಡು ಒಂದು ಕ್ಷಣ ಗರ್ಭಗುಡಿ ಹೊಕ್ಕು ಮಲ್ಲಯ್ಯ ಎಂಬ ಹೆಸರಿಂದ ಪೂಜಿಸಲ್ಪಡುವ ಲಿಂಗಯ್ಯನನ್ನು ಕಂಡಾಗ ಅವನು ಕಲ್ಲಯ್ಯ ಎನ್ನಿಸಿತು. ಕಂಡೆ ಎಂಬ ತೃಪ್ತಿ ಹೊರತು ದರ್ಶನವಾಯಿತು ಎಂಬ ಭಾವ ಉಂಟಾಗಲಿಲ್ಲ. ಏನೂ ಅನ್ನಿಸಲಿಲ್ಲವಾದರೂ ಸಹಸ್ರಾರು ವರ್ಷಗಳಿಂದಲೂ ಕೋಟ್ಯಂತರ ಭಕ್ತರನ್ನು ತನ್ನೆಡೆಗೆ ಸೆಳೆಯುತ್ತಿರುವ ಈತ ಸಾಮಾನ್ಯನಲ್ಲ ಎನ್ನಿಸಿತು. ಒಮ್ಮೊಮ್ಮೆ ಕ್ಷಣಮಾತ್ರದ ದಿವ್ಯದರ್ಶನವು ಎಂತಹ ಅದ್ಭುತ ಪ್ರಭಾವವನ್ನು ಉಂಟು ಮಾಡಬಲ್ಲದು! ಬದುಕನ್ನು ಸಂಪೂರ್ಣ ಬದಲಿಸಬಲ್ಲದು. ಬಾಲಕ ಸಿದ್ಧರಾಮನು ಇದೇ ಲಿಂಗವನ್ನು ಕಂಡು "ಇವನು ನನ್ನ ಮಲ್ಲಯ್ಯನಲ್ಲ, ಕಲ್ಲಯ್ಯ" ಎಂದದ್ದು ಅವನ ಧ್ವನಿಯಾದರೂ ನನ್ನ ಒಳಮಾತಾದಂತೆ ಭಾಸವಾಯಿತು.

ಮಾರನೆಯ ಬೆಳಿಗ್ಗೆ ಎಂಟು ಗಂಟೆ ಹೊತ್ತಿಗೆ ಪಾತಾಳ ಗಂಗೆಗೆ ಹೋಗಲು ತಯಾರಾಗಿ ನಿಂತಿದ್ದ ಯಾತ್ರಿಕ ದೋಣಿಯನ್ನು ಹತ್ತಿದೆವು. ಕಣ್ಣೆದುರಿಗೆ ಕೃಷ್ಣಾ ನದಿಗೆ ಕಟ್ಟಿದ ನಾಗಾರ್ಜುನ ಸಾಗರ ಅಣೆಕಟ್ಟು ಕಾಣುತ್ತಿತ್ತು. ಹಿನ್ನೀರಿನ ಕಾರಣ ಅಷ್ಟಾಗಿ ಆರ್ಭಟ ಇರಲಿಲ್ಲ. ನದಿಯ ಪಾತ್ರದುದ್ದಕ್ಕೂ ನಾವೆಯು ಚಲಿಸುತ್ತಿರುವಾಗ ಅಕ್ಕಮಹಾದೇವಿಯು ಆಗ ಹೇಗೆ ಕದಳಿಯನ್ನು ಹೊಕ್ಕಿರಬಹುದು ಎಂಬ ಆಲೋಚನೆ ಆರಂಭವಾಗಿತ್ತು. ಮುಂದೆ ಸಾಗುತ್ತಿದ್ದಂತೆ ದೃಶ್ಯ ಬಲು ರಮಣೀಯವಾಗಿತ್ತು. ನದಿಯ ವಿಸ್ತೃತ ಹರಹು, ಅದಕ್ಕೆ ಒತ್ತಿಕೊಂಡಿದ್ದ ಶ್ರೀಶೈಲಗಿರಿಗಳ ಹಸಿರು ಹುಲ್ಲು, ಗಿಡಮರಗಳ ಹಚ್ಚಡ ಹೊದ್ದುಕೊಂಡು ನಳನಳಿಸುತ್ತಿದ್ದವು. ಆಗಸದಲ್ಲಿ ಮೇಘಗಳು ಅಲ್ಲಲ್ಲಿ ಕಪ್ಪು ಕಪ್ಪಾಗಿ ಕಂಡರೂ ಬಿಳಿಯ ಹಿನ್ನೆಲೆಯಲ್ಲಿ ಮನೋಹರವಾಗಿದ್ದುವು. ಮೇಘಗಳ ಹಿಂದೆ ಆಗಾಗ ಇಣುಕುತ್ತಿದ್ದ ಬೆಳ್ಳಿ ಬೆಳಕು ಭಗವಂತನ ನೆನಪನ್ನು ಅಲೆಯಲೆಯಾಗಿ ನೆನಪಿಸುತ್ತಿತ್ತು.

ನಾವೆಯಲ್ಲಿ ಕುಳಿತು ಮೇಘಗಳನ್ನು ದರ್ಶಿಸುತ್ತಿದ್ದಾಗ, ಆ ಬೃಹತ್ ಶಿಖರಗಳ ಪ್ರಶಾಂತ ಸ್ನಿಗ್ಧತೆ, ದಿವ್ಯತೆಯನ್ನು ಕಾಣುತ್ತಿರುವಾಗ ಮನವು ಮಲ್ಲಯ್ಯನನ್ನು ಆವರಿಸಿತ್ತು. ದಿಗಂಬರೆಯಾಗಿ, ಮಲ್ಲಯ್ಯನ ಮೀಸಲು ಸತಿಯಾಗಿ, ತನ್ನ ಗಂಡನ ಮನೆಗೆ ಬಂದ ಸಂಭ್ರಮದಲ್ಲಿ ನಡೆದ ಅಕ್ಕಮಹಾದೇವಿಯನ್ನು ನೆನೆಯುತ್ತಲೇ ದುಃಖ ಆವರಿಸಿತು. ಇಂತಹ ದಿವ್ಯ ವಿರಾಗಿಯ ಎದುರು ನನ್ನ ಕ್ಷುದ್ರತನ, ಮೋಹ, ಸುಖಾಭಿಲಾಷೆ, ಹಸಿವು, ವಿಷಯತೃಷೆಗಳ ಒಲವು, ಭಗವಂತನಲ್ಲಿ ಹುಟ್ಟದ ಎಡೆಬಿಡದ ಭಕ್ತಿಯನ್ನು ನೆನೆದು ಸಂಕಟವಾಯಿತು. ಅಣ್ಣ ಎನ್ನುತ್ತಲೇ ಬಸವಣ್ಣನ ನೆನಪಾಯಿತು. ಈ ಪುಣ್ಯಾತ್ಮರ ವ್ಯಕ್ತಿತ್ವಗಳೇ 'ಅಕ್ಕ-ಅಣ್ಣ' ಎಂಬ ಶಬ್ದಗಳಿಗೆ ಭವ್ಯವಾದ ಅರ್ಥಶಕ್ತಿಯಾಗಿ ಗೋಚರಿಸಿ ಆನಂದವಾಯಿತು. ಗಾಳಿ, ಮಳೆ, ಚಳಿ, ಘೋರಾರಣ್ಯ, ಹಿಂಸ್ರ ಪಶುಗಳು, ನಿರ್ಜನಾವರಣದಲ್ಲಿ ನೆಲೆನಿಂತ ಅಕ್ಕನನ್ನು ನೆನೆದು ಮಲ್ಲಯ್ಯನೊಂದಿಗೆ ನುಡಿಯಾಡುವಂತೆ ಹಾಡು ಹಾಡಾಗ ತೊಡಗಿತು. 'ಹೇಗೆ ಪೊರೆದಯೊ ಮಲ್ಲಯ್ಯ.. ಅಕ್ಕನ ಹೇಗೆ ಪೊರೆದೆಯೊ ಮಲ್ಲಯ್ಯ' ಎಂಬ ಪ್ರಶಂಸೆ, ಪ್ರಶ್ನೆಯೊಂದಿಗೆ ನನ್ನ ನೆನಪಾಗಿ, ನನ್ನಂತಹ ಹೀನನ, ಭಕ್ತಿರಹಿತನ, ಅಶುದ್ಧನ, ಅಜ್ಞಾನಿಯ ನೀನು 'ಹೇಗೆ ಪೊರೆವೆಯೊ ಮಲ್ಲಯ್ಯ.. ಎನ್ನನು ಹೇಗೆ ಪೊರೆವೆಯೊ ಮಲ್ಲಯ್ಯ?.. ಮಲ್ಲಯ್ಯ ಮಲ್ಲಯ್ಯ.. ಜಗದೊಡೆಯ ಮಲ್ಲಯ್ಯಾ' ಎಂದೆನಿಸಿತು. ಸಂಕಟ ಅಧಿಕವಾಗಿ ಕಾರಂಜಿಯಿಂದ ಚಿಲುಮೆ ಉಕ್ಕುವಂತೆ ಕಣ್ಣೀರು ಉಕ್ಕಿತು. ಉಬ್ಬಳಿಕೆ ಬಿಕ್ಕುವಿಕೆ ತಿದಿಯಂತೆ ಏರಿ ಏರಿ ಇಳಿಯುತ್ತಿತ್ತು. ಮಲ್ಲಯ್ಯನ ಭಾವದರ್ಶನವೆಂದರೆ ಇದೆಯೇ? ಮಲ್ಲಯ್ಯ ಈ ಗಿರಿ, ಶಿಖರ, ನದಿ, ಮೇಘಗಳ ಮುಖಾಂತರ ಕಣ್ಣೀರುಕ್ಕಿಸಿ ತನ್ನ ನಿಜರೂಪ ತೋರುತ್ತಿದ್ದಾನೆಯೇ?

'ಆನಂದಮಯ ಈ ಜಗ ಹೃದಯ.. ಶಿವನಿಲ್ಲದ ಸೌಂದರ್ಯವೇ.. ಶವಮುಖದ ಕಣ್ಣು!' ಕುವೆಂಪು ಎಂಬ ರಸಋಷಿವಾಣಿ ಪದವಾಗಿ ಶಿವನ ನೆನಪನ್ನು ಹಸಿರಾಗಿಸತೊಡಗಿತ್ತು. ಇದನ್ನೇ ಪರಮಹಂಸರು 'ಭಾವ' ಎನ್ನುತ್ತಾರೆಯೇ? ಈ ಭಗವತ್ ಭಾವದಲ್ಲಿದ್ದಾಗ ಸುತ್ತಮುತ್ತಲಿನವರು ಏನಂದುಕೊಳ್ಳುತ್ತಾರೆ ಎಂಬ ಭಾವನೆ ಲಯವಾಗಿ ಹೋಗುತ್ತದೆಯೇ? ಇದು ಅಷ್ಟಾಂಗಯೋಗದ 'ಧಾರಣ'ದ ಏಳನೇ ಮನೆಯೇ? ಅಥವಾ ಇದೆಲ್ಲಾ ಭ್ರಾಂತಿಯೇ? ಇದು ಭ್ರಾಂತಿಯಲ್ಲ, ನಿಜ ಎನ್ನಿಸುವುದು ದೃಢವಾಗಿ ಸಮಾಧಾನ ನೆಲೆ ನಿಂತಿತು. ಜಗವೆಲ್ಲಾ ಅಪ್ಪಿಕೊಳ್ಳುವ ಬಿರುಗಾಳಿಯ ಭಾವಲಹರಿ ಕ್ಷೀಣಿಸುವ ಹೊತ್ತಿಗೆ ಸುಮಾರು ಒಂದೂವರೆ ತಾಸಿನ ನಾವೆ ಯಾನ ಮುಗಿದು ದಡ ಸೇರಿದೆವು.

ಅಲ್ಲೊಂದೆರಡು ಗಿರಿಜನರ ಗುಡಿಸಲುಗಳು, ಬಡಜನರು, ನಾಯಿಗಳು ಇದ್ದವು. ಒಬ್ಬ ಮಾರ್ಗದರ್ಶಿಯ ಹಿಂದೆ ನಾವು ಗುಡ್ಡ ಏರತೊಡಗಿದೆವು. ಅಕ್ಕ ಈ ಮಣ್ಣಿನ ಮೇಲೆ ಬರಿಗಾಲಿನಲ್ಲಿ, ಇದೇ ಹಾದಿಯಲ್ಲಿ ಕ್ರಮಿಸಿ ಕದಳಿಯ ಕಂಡಳೇ? ಮರಗಳಿಗೆ ದಿಕ್ಸೂಚಿ ಫಲಕಗಳನ್ನು ಲಗತ್ತಿಸಿ, ಅದರಲ್ಲಿ ಕದಳಿ ವನದ ದಿಕ್ಕು, ದೂರ, ಬರೆದವನ ಹೆಸರುಗಳನ್ನು ನಮೂದಿಸಿದ್ದರು. ಬೆಟ್ಟವನ್ನು ಏರುವಾಗ ಮನವು ಹೊರಮುಖವಾಗುತ್ತಲೇ ಆಯಾಸ, ಸುಸ್ತು ಆಗತೊಡಗಿತ್ತು. ಒಳಮುಖವಾದಾಗ ಶ್ರಮ ಎರಲಿಲ್ಲ. ಬೆಟ್ಟ ಏರಿ ಶಿಖರದ ತುದಿ ತಲುಪಿ ಸಾಗುತ್ತಿದ್ದಂತೆ ಒಂದು ವಿಸ್ತಾರ ಬಯಲು. ಸಮತಟ್ಟು ಜಾಗ..! ಆಟ ಆಡುವ ಮೈದಾನದಂತಹ ಬಯಲು. 'ಬಯಲು' ಶಬ್ದ ನೆನಪಿಗೆ ಬಂದೊಡನೆಯೇ ಮನದ ಮುಂದೆ ಅಲ್ಲಮ, ಶಿಶುನಾಳ ಶರೀಫರ ಮೆರವಣಿಗೆ. ಅಲ್ಲಿಂದ ಶ್ರಮವಿಲ್ಲದ ಹಾದಿ. ಅಂತ್ಯದಲ್ಲಿ ಒಂದು ಕಂದರಕ್ಕೆ ಇಳಿತ. ಒಂದು ಬೃಹತ್ ಬಂಡೆ, ವಿಶಾಲವಾದ ಬಿಸಿಲುಮಚ್ಚಿನಂತೆ ಚಾಚಿಕೊಂಡಿತ್ತು.

ಅದೇ ಕದಳಿಬನದ ಅಕ್ಕಮಹಾದೇವಿ ಗವಿ. ವಿಸ್ತಾರವಾಗಿದ್ದು ಹಲವಾರು ಜನರು ಒಂದು ಭಕ್ತಿಮೇಳ ನಡೆಸುವಷ್ಟು ವಿಶಾಲವಾಗಿತ್ತು. ಅಕ್ಕನ ವಿಗ್ರಹಗಳು, ಗುಲ್ಬರ್ಗದ ಶರಣಬಸವೇಶ್ವರರ ವಿಗ್ರಹಗಳು, ಒಂದು ಶಿವಲಿಂಗ ಅಲ್ಲಿ ಸ್ಥಾಪಿತವಾಗಿದ್ದವು. ಗವಿಯ ಮೇಲಿಂದ ನೀರು ಹನಿ ತೊಟ್ಟಿಕ್ಕುತ್ತಿತ್ತು. ಪುಟ್ಟ ಗೋಡೆಯೊಂದನ್ನು ಕಟ್ಟಿ ಒಂದು ಕೋಣೆಯಂಥ ಸ್ಥಳವನ್ನು ಧ್ಯಾನಕ್ಕಾಗಿ ಭಕ್ತರು ನಿರ್ಮಿಸಿದ್ದರು. ಪ್ರವೇಶದಲ್ಲಿಯೇ ಹರಿಯುವ ಝುರಿಗೆ ಒಂದು ಕಟ್ಟೆ ಕಟ್ಟಿ ನೀರು ಸಂಗ್ರಹಿಸಿದ್ದರು. ಕಮಟು ವಾಸನೆ. ಜಿಡ್ಡುಗಟ್ಟಿದ ನೆಲ. ತುದಿಯಲ್ಲಿ ಪುಟ್ಟದಾಗಿ ಪ್ರವೇಶವಿದ್ದ ಒಂದು ಒಳಗವಿ! ಹುಡುಗರು ಕಾಡುಹೂಗಳನ್ನು ತಂದು ಶಿವನನ್ನು ಪೂಜಿಸಿದರು. ಎಲ್ಲರೂ ಧ್ಯಾನಕ್ಕೆ ಕುಳಿತೆವು. ಪುಟ್ಟ ಹುಡುಗಿಯೊಬ್ಬಳು ಭಾವಾವಸ್ಥೆಗೇರಿ ಅಕ್ಕನ ಸ್ಮೃತಿಯಲ್ಲಿ ಅಳತೊಡಗಿದಳು. ಗುರುಕೃಪೆಯೆಂದರೆ ಇದೆಯೇ? ಅಕ್ಕನ ಅನುಗ್ರಹ ಈ ರೂಪಾಗಿ ಹೃದಯ ಹಿಂಡುವುದೇ? ಪರಮಹಂಸರು ಹೇಳುವಂತೆ ದೈವವ್ಯಾಕುಲತೆ ಇರಬಹುದು ಎನ್ನಿಸಿತು.

ಸಂಜೆ ನಾಲ್ಕು ಗಂಟೆಯ ಒಳಗೆ ಪುನಃ ಎಂಟು ಕಿ.ಮೀ.ನಷ್ಟು ದೂರ ನಡೆದು ದೋಣಿಯನ್ನು ತಲುಪುವುದು ಅನಿವಾರ್ಯವಾಗಿತ್ತು. ಆಗಲೇ ಮಧ್ಯಾಹ್ನ ಒಂದೂವರೆ. ಎಲ್ಲರೂ ಪ್ರಸಾದವನ್ನು ಸೇವಿಸಿ ಹೊರಡಲು ಅಣಿಯಾದರೂ ಮನಸ್ಸಿಗೆ ೨-೩ ದಿನಗಳ ಕಾಲವಾದರೂ ಆ ಅಕ್ಕನ ಗವಿಯಲ್ಲಿ ಉಳಿಯುವ ಆಸೆ ಇತ್ತು. ಆಶ್ಚರ್ಯವೆಂದರೆ ನಾವು ದೋಣಿ ಇಳಿದು, ಗುಡ್ಡ ಹತ್ತಲು ಆರಂಭಿಸಿದಾಗ ಗಿರಿಜನರ ಗುಡಿಸಲಿಂದ ನಮ್ಮೊಂದಿಗೆ ಹೊರಟ ಎರಡು ನಾಯಿಗಳು ನಮ್ಮ ನೆರಳಿನಂತೆ, ನಮ್ಮ ಗುರುವಿನಂತೆ, ನಮ್ಮ ಸಂಗಾತಿಯಂತೆ ಬರುತ್ತಿದ್ದವು. ಗವಿಯಲ್ಲಿ ನಾವು ಧ್ಯಾನಕ್ಕೆ ಕೂತರೆ ಅವೂ ಕಾಲು ಮಡಿಚಿಕೊಂಡು ಮೌನವಾಗಿ ಕೂರುತ್ತಿದ್ದವು, ಕಣ್ಣು ಮುಚ್ಚಿಕೊಂಡಿರುತ್ತಿದ್ದವು! ನಮ್ಮೊಂದಿಗೆ ಅವೂ ಉಂಡವು, ನೀರು ಕುಡಿದವು. ನಾವು ದಣಿವಾಗಿ ನಿಂತಾಗ ಅವೂ ನಿಂತವು, ಕುಳಿತಾಗ ಅವೂ ಕುಳಿತವು. ಧರ್ಮರಾಯ ಸಶರೀರಿಯಾಗಿ ಸ್ವರ್ಗಾರೋಹಣ ಮಾಡುವಾಗ ಹಿಂಬಾಲಿಸಿ ಬರುತ್ತಿದ್ದ ಯಮಧರ್ಮನ ನಾಯಿಯ ಕಲ್ಪನೆ ನೆನಪಾಯಿತು. ಅವು ನಮ್ಮನ್ನು ದೋಣಿ ಹತ್ತಿಸಿದವು. ಕೆಲವರು "ಒಂದೂ ಬಾಳೆ ಗಿಡ ಕಾಣಿಸಲೇ ಇಲ್ಲ.. ಕದಳಿವನ ಇದಲ್ಲ.. ಇನ್ನೂ ಮುಂದಿರಬೇಕು.." ಎನ್ನುತ್ತಿದ್ದರು. ಅದು ನಿಜ ಎನ್ನಿಸಿದರೂ ಸ್ಥೂಲ ಕದಳಿಗಿಂತಲೂ ಒಳಗಿನ ಸೂಕ್ಷ್ಮ ಕದಳಿಯ ಬಗ್ಗೆ ಗಮನ ಹರಿಸುವುದು ಉತ್ತಮವೆಂದು ಭಾವಿಸಿ ಮೌನಕ್ಕೆ ಶರಣಾದೆವು.

ಪುನಃ ನಾವೆಯನ್ನು ಹತ್ತಿ ಹಿಂದಿರುಗುವಾಗ ಮೇಘ ಗರ್ಜಿಸಿತ್ತು. ಕೆಲಕಾಲ ಮಳೆ ಸುರಿಯಿತು. ಶಿವನ ಕೃಪೆಯೇ ವರ್ಷಧಾರೆಯಾಗಿತ್ತು. 'ಆನಂದಮಯ ಈ ಜಗ ಹೃದಯ' ಕುವೆಂಪು ವಾಣಿಗೆ ಸಾಕ್ಷಿ ಎನಿಸಿತು. ಅಕ್ಕನ ಗವಿಯಲ್ಲಿ ನಾವು ಬಯಸುವಂತಹ ಘನವಾದದ್ದೇನೂ ಘಟಿಸದಿದ್ದರೂ ಅದು ಘನಕ್ಕೆ ಬೀಜ ಬಿತ್ತಿದೆಯೇನೋ ಎನ್ನಿಸುತ್ತಿತ್ತು. ಅಲ್ಲಿ ಚಲಿಸುವಾಗಲೆಲ್ಲ ಅಕ್ಕ, ಮಲ್ಲಯ್ಯ, ಸೃಷ್ಟಿಕರ್ತರು ನಮ್ಮ ಚಲನವಲನವನ್ನು ಗಮನಿಸು ತ್ತಿದ್ದಾರೆ ಎಂದು ಭಾಸವಾಗುತ್ತಿತ್ತು.

ಬೆಳಿಗ್ಗೆ ಪಂಚಧಾರಾ, ಶಿಖರೇಶ್ವರ, ಮಹಾನಂದಿಗಳನ್ನು ನೋಡುತ್ತಾ ಹಿಂದಿರುಗುವಾಗ ಅವು ಕೇವಲ ಪ್ರೇಕ್ಷಣೀಯ ಯಾತ್ರಾಸ್ಥಳವೆನ್ನಿಸುತ್ತಿದ್ದವು.

**'ಬಯಲು ಅಲಾವಿಗೆ ನವಿಲು ಕುಣಿದು ನಿಂತು**
**ತೈಲವಿಲ್ಲದ ಜ್ಯೋತಿ ಬೆಳಕು ಮದೀನದಿ..'** ಎಂಬ ಶಿಶುನಾಳ ಶರೀಫರ ವಾಣಿ ನೆನಪಾಯಿತು.

**ಕಾಯವೆಂಬ ಕದಳಿಯಂ ಪೊಕ್ಕು, ಪ್ರಾಣನೆಂಬ ಗಹ್ವರದೊಳಗೆ,**
**ಸಕಲೇಂದ್ರಿಯವೆಂಬ ಕೋಣೆ ಕೋಣೆಗಳಲ್ಲಿ, ತಿರುಗಾಡುತ್ತಾ**
**ಬರಲಾಗಿ ಮೇರು ಮಂದಿರ ತ್ರಿಕೋಣೆಯಲ್ಲಿ ಬೆಳಗಾಯಿತು.**
**ಗುಹೇಶ್ವರ, ಲಿಂಗವೆಂಬೊಂದು ರೂಪಾಯಿತು.**
**ಕದಳಿಯೆಂಬುದು ತನು, ಕದಳಿಯೆಂಬುದು ಮನ,**
**ಕದಳಿಯೆಂಬುದು ವಿಷಯಂಗಳು**
**ಕದಳಿಯೆಂಬುದು ಭವ ಘೋರಾರಣ್ಯ,**
**ಈ ಕದಳಿಯೆಂಬುದ ಗೆದ್ದು ತನು ಬದುಕಿ ಬಂದು**
**ಕದಳಿಯ ಬನದಲ್ಲಿ ಭವಹರನ ಕಂಡೆನು**
**ಭಾವಗೆದ್ದು ಬಂದ ಮಗಳೆ ಎಂದು**
**ಕರುಣದಿಂದ ತೆಗೆದು ಬಿಗಿದಪ್ಪಿದಡೆ**
**ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು.**

– ಅಕ್ಕ ಮಹಾದೇವಿ